





## ಭಾರತದ ‘ಸ್ಟಾರ್ಟ್ ಅಪ್ ರಾಜಧಾನಿ’ ಬೆಂಗಳೂರು

## ಮೊದಲ ಅನಿಮೇಷನ್ ನೀತಿ

### ನವೋದ್ಯಮಕ್ಕೆ ಉತ್ತೇಜನ

ಬ್ರ್ಯಾಂಡ್ ಬೆಂಗಳೂರು ಈಗ ಭಾರತದ ‘ಸ್ಟಾರ್ಟ್ ಅಪ್’ ರಾಜಧಾನಿ ಎಂದು ಚಿರಪರಿಚಿತಗೊಂಡಿದೆ. ಜಗತ್ತಿನ ನವೋದ್ಯಮಗಳ ಸ್ಥಾಪನೆಯಲ್ಲಿ ಹೆಸರಾಗಿರುವ ಇಪ್ಪತ್ತು ಪ್ರಮುಖ ನಗರಗಳಲ್ಲಿ ಬೆಂಗಳೂರು ಸಹ ಒಂದಾಗಿದೆ. ಹೀಗಾಗಿ ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ ನೀಡಲು ರಾಜ್ಯ ಸರ್ಕಾರ 2015ರಲ್ಲಿ ಸ್ಟಾರ್ಟ್‌ಅಪ್ ನೀತಿ ಘೋಷಿಸಿದೆ.

ಕರ್ನಾಟಕ ಅನಿಮೇಷನ್, ವಿಎಫ್‌ಎಕ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ ನೀತಿ– 2017-–22 ರೂಪಿಸಲಾಗಿದೆ. ಇದೂ ದೇಶದಲ್ಲೇ ಮೊದಲು. ಇದರಡಿ ಅನಿಮೇಷನ್ ಫೀಚರ್ ಫಿಲ್ಮ್ ಮತ್ತು ವಿಷುಯಲ್ ಎಫೆಕ್ಟ್ ಯೋಜನೆಗಳಿಗೆ ಆರಂಭಿಕ ಸಹಾಯಧನ ನೀಡಲಾಗುವುದು. ಈ ಕ್ಷೇತ್ರದಲ್ಲಿ ಅತ್ಯುನ್ನತ ತಂತ್ರಜ್ಞಾನ ಅಭಿವೃದ್ಧಿಗೆ ರೂ. 20 ಕೋಟಿ ನಿಗದಿ ಮಾಡಲಾಗಿದೆ.

‘ಯುವ ಯುಗ’ ಎಂಬ ಕಾರ್ಯಕ್ರಮದ ಮೂಲಕ 1,10,000 ವ್ಯಕ್ತಿಗಳಿಗೆ ಐಟಿ, ಎಲೆಕ್ಟ್ರಾನಿಕ್ಸ್, ಅನಿಮೇಷನ್ ಹಾಗೂ ಇತರ ವಲಯಗಳಲ್ಲಿ ತರಬೇತಿ ನೀಡಲಾಗುತ್ತಿದೆ.